ದಿನಾಂಕಃ 07.07.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಬಿ.ಎನ್. ವಕೀಲರಿಂದ ಃ**

01. ಸರ್ವೇ ನಂ–209 ರಲ್ಲಿ ಒಟ್ಟು 2 ಎಕರೆ 4 ಗುಂಟೆ ಜಮೀನು ಜೊತೆಯಲ್ಲಿ 20 ಗುಂಟೆ ಖರಾಬು ಇರುತ್ತದೆ. ಚೆನ್ನೇಗೌಡ ಬಿನ್ ಕೆಂಚೇಗೌಡ ನನ್ನ ತಾತ. ಸರ್ವೇ ನಂ–209 ರಲ್ಲಿ ಕಾಲುವೆಯ ನಿರ್ಮಾಣಕ್ಕಾಗಿ ಒಂದು ಎಕರೆ 28 ಗುಂಟೆ ಜಮೀನು ಭೂ–ಸ್ವಾಧೀನವಾಗಿದೆ. ನನ್ನ ತಂದೆಯ ಹೆಸರಿನಲ್ಲಿದ್ದ 6 ಗುಂಟೆ ಜಮೀನ, ದೊಡ್ಡಪ್ಪನ ಹಸರಿನಲ್ಲಿದ್ದ 1 ಎಕರೆ 2 ಗುಂಟೆ ಜಮೀನು ಭೂ–ಸ್ವಾಧೀನವಾಗಿತ್ತು. ನನ್ನ ತಂದೆಯ ಭಾಗಕ್ಕೆ ಬಂದ ಜಮೀನಿನಲ್ಲಿ 26 ಗುಂಟೆ ಜಮೀನು ಭೂ–ಸ್ವಾಧೀನವಾಗಿತ್ತು ಎಂದರೆ ಸರಿಯಲ್ಲ. ಸರ್ವೆ ನಂ–209 ರಲ್ಲಿ ಭೂ–ಸ್ವಾಧೀನವಾದ ನಂತರ ಒಟ್ಟಾರೆ ಉಳಿದುಕೊಂಡ ಭೂಮಿ 16 ಗುಂಟೆ ಎಂದರೆ ಸರಿಯಲ್ಲ. ಭೂ–ಸ್ವಾಧೀನವಾಗಿದ ನಂತರ ನನ್ನ ತಂದೆ ಮತ್ತು ದೊಡ್ಡಪ್ಪ ಭೂ–ಸ್ವಾಧೀನವಾದ ನಂತರ ಬಂದ ಪರಿಹಾರದ ಹಣವನ್ನು 1991 ರಲ್ಲಿ ವ್ಯವಸ್ಥಾ ಪತ್ರವನ್ನು ಮಾಡಿಕೊಳ್ಳುವ ಮೂಲಕ ಸಮನಾಗಿ ಹಂಚಿಕೊಂಡಿದ್ದರು ಎಂದರೆ ಸರಿಯಲ್ಲ. 16 ಗುಂಟೆ ಜಮೀನಿನ ಪೈಕಿ ಮೂರು ಗುಂಟೆ ಜಮೀನನ್ನು ನನ್ನ ತಂದೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಉಳಿದ 13 ಗುಂಟೆ ಜಮೀನನ್ನು ನನ್ನ ತಂದೆ ಮತ್ತು ದೊಡ್ಡಪ್ಪ ಸಮನಾಗಿ ಹಂಚಿಕೊಂಡು ತಲಾ 6.5 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ಭಾಗಕ್ಕೆ ಬಂದ 6.5 ಗುಂಟೆ ಜಮೀನಿಗೆ ಅಂಟಿಕೊಂಡಂತೆ ಇರುವ 20 ಗುಂಟೆ ಜಮೀನಿನ ಸ್ವಾಧೀನಾನುಭವದಲ್ಲಿ ನಾವೇ ಇರುತ್ತೇವೆ ಎಂದರೆ ಸರಿಯಲ್ಲ. ನಾವು ಸ್ವಾಧೀನದಲ್ಲಿರುವುದು ಕೇವಲ 6.5 ಗುಂಟೆಯಲ್ಲಿ ಮಾತ್ರ ಆದರೂ ಸಹ 33 ಗುಂಟೆಯ ಸ್ವಾಧೀನದಲ್ಲಿರುತ್ತೇನೆ ಎಂದು ಹೇಳುತ್ತ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ

ಸರಿಯಲ್ಲ. ಭೂ ಸ್ವಾಧೀನದ ಹಣ ನನ್ನ ದೊಡ್ಡಪ್ಪನವರ ಹೆಸರಿಗೆ ಬಂದಿದ್ದರು ಸಹ ನನ್ನ ತಂದೆ ಮತ್ತು ದೊಡ್ಡಪ್ಪ ಅದನ್ನು ಸಮನಾಗಿ ಹಂಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**